<u>ಸಿ.ಡಬ್ಲೂ.-41 / ಪಿ.ಡಬ್ಲೂ-02</u>

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 2/2011

| | | |
|---|---|---|
| ಸಾಕ್ಷಿದಾರರ ಹೆಸರು | : | ಸಿ. ಮಲ್ಲಿಕ್ |
| ತಂದೆಯ ಹೆಸರು | : | ಕೆ. ಚಿಕ್ಕಣ್ಣ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಅಡಿಷನಲ್ ಎಸ್.ಪಿ., ಮೈಸೂರು. |
| ವಾಸಸ್ಥಳ | : | ಮೈಸೂರು. |

**<u>ಸಾಕ್ಷಿಯನ್ನು ದಿನಾಂಕಃ 01.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಭಾ. ದಂ. ಪ್ರಕ್ರಿಯೆ ಸಂ. 299 ರಡಿಯಲ್ಲಿ ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ</u>**

ನಾನು ದಿನಾಂಕಃ 26.08.2009 ರಿಂದ ದಿನಾಂಕಃ 17.11.2011 ರವರೆಗೆ ಹೆಚ್.ಡಿ. ಕೋಟೆ ವೃತ್ತದಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 02.10.2010 ರಂದು ಈ ಪ್ರಕರಣದ ಕಡತವನ್ನು ಚಾಸಾ-38 ರವರಿಂದ ಪಡೆದು ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಅಂದರೆ ದಿನಾಂಕಃ 02.10.2010 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ನಂತರ ಅದೇ ದಿನ ಪ್ರಕರಣದಲ್ಲಿ ಕಳುವಾದ ಕ್ವಾಲಿಸ್ ಕಾರು ಹೆಚ್.ಡಿ. ಕೋಟೆಯ ಹ್ಯಾಂಡ್ ಪೋಸ್ಟ್-ಸರಗೂರು ರಸ್ತೆ ಬಳಿ ಪತ್ತೆಯಾಗಿರುವುದಾಗಿ ಮಾಹಿತಿ ಬಂದಿದ್ದು, ಆ ಪ್ರಕಾರ ಸದರಿ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ

ಪರಿಶೀಲಿಸಿರುತ್ತೇನೆ. ನಂತರ ಅದೇ ದಿನ ಹೆಚ್.ಡಿ. ಕೋಟೆ ಹಾಗು ಸರಗೂರು ಪೋಲೀಸ್ ಠಾಣೆಯ ಪಿ.ಎಸ್.ಐ. ಗಳಾದ ಚಾಸಾ-39 ಮತ್ತು ಚಾಸಾ-40 ರವರನ್ನು ಆರೋಪಿತರ ಪತ್ತೆಗೆ ನಿಯೋಜಿಸಿರುತ್ತೇನೆ. ನಂತರ ಅದೇ ದಿನ ಚಾಸಾ-40 ರವರು 1 ಮತ್ತು 2 ನೇ ಆರೋಪಿಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು ನಂತರ 1 ಮತ್ತು 2 ನೇ ಆರೋಪಿಗಳ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ವಿಚಾರಣೆ ಮಾಡಿ ಅವರ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಬೆಳಿಗ್ಗೆ 06.30-07.15 ಗಂಟೆಯವರೆಗೆ ಅಮಾನತ್ತು ಮಹಜರ್ ಕ್ರಮ ಜರುಗಿಸಿ 1 ನೇ ಆರೋಪಿಯ ವಶದಲ್ಲಿದ್ದ 01 ನೋಕಿಯಾ ಮೊಬೈಲ್ ಮತ್ತು 2 ನೇ ಆರೋಪಿಯ ವಶದಲ್ಲಿದ್ದ 01 ಜಿ5 ಮೊಬೈಲ್ ಗಳನ್ನು ಅಮಾನತ್ತುಪಡಿಸಿಕೊಂಡು ಅವುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 271/2010 ರಂತೆ ದಾಖಲಿಸಿಕೊಂಡು ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ ಜರುಗಿಸಿದ ಅಮಾನತ್ತು ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಅಮಾನತ್ತು ಮಹಜರ್ ಅನ್ನು **ನಿ.ಪಿ.-17** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-17(ಎ)** ಎಂದು ಗುರುತಿಸಲಾಯಿತು. ನಂತರ ಅದೇ ದಿನ 1 ಮತ್ತು 2 ನೇ ಆರೋಪಿಗಳು ಹಾಗು ವಾಹನ ಸಿಕ್ಕಿದ ಸ್ಥಳವಾದ ಹ್ಯಾಂಡ್ ಪೋಸ್ಟ್ ನಿಂದ ಸರಗೂರು ಕಡೆ ಹೋಗುವ ಜಕ್ಕಳ್ಳಿ ದೊಡ್ಡಕೆರೆಯ ಬಳಿಗೆ ಹೋಗಿ ಅಲ್ಲಿ ಖಾಲಿ ಜಾಗದಲ್ಲಿ ಕೆಎ 04 ಎಂಬಿ 786 ನೋಂದಣಿ ಸಂಖ್ಯೆಯ ಕ್ವಾಲಿಸ್ ಕಾರು ಇದ್ದ ಸ್ಥಳದಲ್ಲಿ ಪಂಚರಾದ

ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಬೆಳಿಗ್ಗೆ 07.30-09.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಸದರಿ ಕ್ವಾಲಿಸ್ ಕಾರನ್ನು ಅಮಾನತ್ತುಪಡಿಸಿಕೊಂಡು ಠಾಣೆಗೆ ಹಿಂದಿರುಗಿ ಠಾಣಾ ಮಾಲುಪಟ್ಟಿ ಸಂಖ್ಯೆ 272/2010 ರಂತೆ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ ಜರುಗಿಸಿದ ಅಮಾನತ್ತು ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಅಮಾನತ್ತು ಮಹಜರ್ ಅನ್ನು **ನಿ.ಪಿ.-18** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-18(ಎ)** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪಿರ್ಯಾದುದಾರರಾದ ಚಾಸಾ-1 ರವರು ಆರೋಪಿಗಳು ಕೃತ್ಯ ಎಸಗಿದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ-1, ಚಾಸಾ-4 ಹಾಗು ಚಾಸಾ-5 ರವರ ಸಮಕ್ಷಮ ಬೆಳಿಗ್ಗೆ 09.45-10.30 ರವರೆಗೆ ಕೃತ್ಯ ಸ್ಥಳ ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿಯೇ ಕಚ್ಚಾ ನಕಾಶೆ ತಯಾರಿಸಿರುತ್ತೇನೆ. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳು ತಾನು ಮೇಲೆ ಹೇಳಿದಂತೆ ಈ ಪ್ರಕರಣದಲ್ಲಿ ಜರುಗಿಸಿದ ಸ್ಥಳ ಮಹಜರ್ ಹಾಗು ಕಚ್ಚಾ ನಕಾಶೆ ಎಂದು ಗುರುತಿಸಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಸ್ಥಳ ಮಹಜರ್ ಅನ್ನು **ನಿ.ಪಿ.-19** ಎಂದು, ಕಚ್ಚಾ ನಕಾಶೆಯನ್ನು **ನಿ.ಪಿ.-20** ಹಾಗು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ **ನಿ.ಪಿ.-19(ಎ) ಮತ್ತು ನಿ.ಪಿ.-20(ಎ)** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪಿರ್ಯಾದಿಯಾದ

ಚಾಸಾ-1 ರವರು ಆರೋಪಿಗಳು ತನ್ನನ್ನು ಕ್ವಾಲಿಸ್ ಕಾರ್ ನಿಂದ ಹೊರಕ್ಕೆ ತಳ್ಳಿದ ಸ್ಥಳವಾದ ಹುಣಸೂರು-ಬೇಗೂರು ರಸ್ತೆಯ ಕೃಷ್ಣಾಪುರ ಸರ್ಕಲ್ ಬಳಿಗೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಅಲ್ಲಿ ಪಂಚರಾದ ಚಾಸಾ-5 ಮತ್ತು ಚಾಸಾ-6 ರವರ ಸಮಕ್ಷಮ ಬೆಳಿಗ್ಗೆ 11.00-11.40 ಗಂಟೆಯವರೆಗೆ ಇನ್ನೊಂದು ಕೃತ್ಯ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ ಜರುಗಿಸಿದ ಇನ್ನೊಂದು ಸ್ಥಳ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಸ್ಥಳ ಮಹಜರ್ ಅನ್ನು **ನಿ.ಪಿ.-21** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-21(ಎ)** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ನಮ್ಮ ಸಿಬ್ಬಂಧಿಯಾದ ಚಾಸಾ-24 ರವರು ವಾಹನ ತಪಾಸಣೆ ಮಾಡುವಾಗ ಆರೋಪಿಗಳು ಬಂದ ಟಾಟಾ ಸುಮೋ ಕಾರ್ ನಲ್ಲಿ ದೊರೆತ ಕಾರ್ಬನ್ ಮೊಬೈಲ್ ಅನ್ನು ಠಾಣೆಗೆ ಹಾಜರುಪಡಿಸಿದ ಮೇರೆಗೆ ಪಂಚರಾದ ಚಾಸಾ-6 ಹಾಗು ಚಾಸಾ-9 ರವರ ಸಮಕ್ಷಮ ಮಧ್ಯಾಹ್ನ 12.00-12.45 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಸದರಿ ಕಾರ್ಬನ್ ಮೊಬೈಲ್ ಅನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ ಜರುಗಿಸಿದ ಇನ್ನೊಂದು ಅಮಾನತ್ತು ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಅಮಾನತ್ತು ಮಹಜರ್ ಅನ್ನು

**ನಿ.ಪಿ.-22** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-22(ಎ)** ಎಂದು ಗುರುತಿಸಲಾಯಿತು. ನಂತರ ಸದರಿ ಅಮಾನತ್ತುಪಡಿಸಿಕೊಂಡ ಮೊಬೈಲ್ ಅನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 273/2010 ರಂತೆ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಇತರ ಆರೋಪಿಗಳ ಪತ್ತೆಗಾಗಿ ಚಾಸಾ-39 ರವರನ್ನು ನಿಯೋಜಿಸಿರುತ್ತೇನೆ. ನಂತರ ಅದೇ ದಿನ 1 ಮತ್ತು 2 ನೇ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕಃ 03.10.2010 ರಂದು ಚಾಸಾ-1 ರವರನ್ನು ವಿಚಾರಿಸಿ ಅವರ ಮರು ಹೇಳಿಕೆ ಹಾಗು ಸಾಕ್ಷಿದಾರರಾದ ಚಾಸಾ-2, ಚಾಸಾ-3, ಚಾಸಾ-7, ಚಾಸಾ-8, ಚಾಸಾ-23, ಚಾಸಾ-25 ಮತ್ತು ಚಾಸಾ-26 ರವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 04.10.2010 ರಂದು ಸರಗೂರು ಪೋಲೀಸ್ ಠಾಣಾ ಸಿಬ್ಬಂಧಿಗಳಾದ ಚಾಸಾ-29 ರಿಂದ ಚಾಸಾ-34 ಹಾಗು ಚಾಸಾ-40 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕಃ 05.10.2020 ರಂದು ಚಾಸಾ-24, ಚಾಸಾ-27 ಹಾಗು ಚಾಸಾ-28 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಅಂದರೆ ದಿನಾಂಕಃ 05.10.2020 ರಂದು ಚಾಸಾ-39 ರವರು ಉಳಿದ ಆರೋಪಿಗಳು ಪತ್ತೆಯಾಗದ ಬಗ್ಗೆ ವರದಿ ನೀಡಿದ್ದು, ಅವರ ಹೇಳಿಕೆಯನ್ನು ದಾಖಲಿಸಿಕೊಂಡು ಸದರಿ ವರದಿ ಹಾಗು ಅವರ ಹೇಳಿಕೆಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಅಂದರೆ ದಿನಾಂಕಃ 05.10.2010 ರಂದು ನ್ಯಾಯಾಲಯದ ಆದೇಶದ ಮೇರೆಗೆ 1

ಮತ್ತು 2 ನೇ ಆರೋಪಿಗಳನ್ನು ಮುಂದಿನ ತನಿಖೆಗೆ ಅಗತ್ಯವಿರುವುದರಿಂದ ಪೋಲೀಸ್ ಅಭಿರಕ್ಷೆಗೆ ಪಡೆದಿರುತ್ತೇನೆ. ನಂತರ ಸದರಿ 1 ಮತ್ತು 2 ನೇ ಆರೋಪಿಗಳನ್ನು ಮತ್ತೆ ವಿಚಾರಿಸಿ ಅವರ ಮುಂದುವರೆದ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ 1 ಹಾಗು 2 ನೇ ಆರೋಪಿಗಳು ತಮ್ಮ ಸ್ವ-ಇಚ್ಛಾ ಹೇಳಿಕೆಯಲ್ಲಿ ಉಳಿದ ಆರೋಪಿಗಳ ಮನೆಯನ್ನು ತೋರಿಸುವುದಾಗಿ ಹಾಗು ಕೃತ್ಯಕ್ಕೆ ಬಳಸಿದ ಟಾಟಾ ಸುಮೋ ಕಾರನ್ನು ತೋರಿಸಿಕೊಡುವುದಾಗಿ ತಿಳಿಸಿರುತ್ತಾರೆ. ನಂತರ ದಿನಾಂಕಃ 07.10.2010 ರಂದು ಸದರಿ 1 ಮತ್ತು 2 ನೇ ಆರೋಪಿಗಳ ಸ್ವ-ಇಚ್ಛಾ ಹೇಳಿಕೆಯ ಆಧಾರದ ಮೇಲೆ ಅವರ ಜೊತೆ ತಮಿಳುನಾಡು ರಾಜ್ಯದ ಕೃಷ್ಣಗಿರಿ ಜಿಲ್ಲೆಯ ಹೊಸೂರು ಟೌನ್ ನ ಇಂದಿರಾನಗರದ 2 ನೇ ಆರೋಪಿಯ ತಂದೆಯಾದ ಚಾಸಾ-13 ರವರ ಹೆಸರಿನಲ್ಲಿದ್ದ ಮನೆಯ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ 2 ನೇ ಆರೋಪಿ ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-14 ಮತ್ತು ಚಾಸಾ-15 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ ಚಾಸಾ-13 ರವರ ಮನೆಯ ಮುಂದೆ ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-23** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-23(ಎ)** ಎಂದು ಗುರುತಿಸಲಾಯಿತು. ನಂತರ 1 ನೇ ಆರೋಪಿಯು ಸದರಿ ಹೊಸೂರು ಟೌನ್ ನ ಎನ್.ಜಿ.ಒ. ಕಾಲೋನಿಯ ಸಂಪತ್ ಲೇಔಟ್ ನಲ್ಲಿರುವ ತನ್ನ ಮನೆಯ ಬಳಿ

ಕರೆದುಕೊಂಡು ಹೋಗಿದ್ದು ಅಲ್ಲಿ 1 ನೇ ಆರೋಪಿಯು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-11 ಮತ್ತು ಚಾಸಾ-12 ರವರ ಸಮಕ್ಷಮ ಮಧ್ಯಾಹ್ನ 12.00-12.30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ 1 ನೇ ಆರೋಪಿಯ ಮನೆಯ ಮುಂದೆ ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-24** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-24(ಎ)** ಎಂದು ಗುರುತಿಸಲಾಯಿತು. ನಂತರ 1 ಮತ್ತು 2 ನೇ ಆರೋಪಿಗಳು ಸದರಿ ಹೊಸೂರು ಟೌನ್ ನ ಜನಪರ ಸ್ಟ್ರೀಟ್ ನಲ್ಲಿರುವ 5 ನೇ ಆರೋಪಿಯಾದ ತನ್ವೀರ್ ರವರ ಮನೆಯ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ 1 ಮತ್ತು 2 ನೇ ಆರೋಪಿಗಳು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-17 ಮತ್ತು ಚಾಸಾ-18 ರವರ ಸಮಕ್ಷಮ ಮಧ್ಯಾಹ್ನ 12.45-01.25 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ 5 ನೇ ಆರೋಪಿಯ ಮನೆಯ ಮುಂದೆ ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-25** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-25(ಎ)** ಎಂದು ಗುರುತಿಸಲಾಯಿತು. ನಂತರ 1 ಮತ್ತು 2 ನೇ ಆರೋಪಿಗಳು ಸದರಿ ಹೊಸೂರು ಟೌನ್ ನ ಜೆ.ಕೆ.ಡಿ. ನಗರ ಬಸ್ತಿಯ ಅವಳಪಳ್ಳಿ ಡ್ಯಾಂ ರಸ್ತೆಯಲ್ಲಿರುವ 4 ನೇ ಆರೋಪಿಯಾದ

ವಿನೋದ್ ರವರ ಮನೆಯ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ 1 ಮತ್ತು 2 ನೇ ಆರೋಪಿಗಳು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-18 ಮತ್ತು ಚಾಸಾ-19 ರವರ ಸಮಕ್ಷಮ ಮಧ್ಯಾಹ್ನ 01.40-02.20 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ 4 ನೇ ಆರೋಪಿಯ ಮನೆಯ ಮುಂದೆ ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-26** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-26(ಎ)** ಎಂದು ಗುರುತಿಸಲಾಯಿತು. ನಂತರ 1 ಮತ್ತು 2 ನೇ ಆರೋಪಿಗಳು ಸದರಿ ಹೊಸೂರು ಟೌನ್ ನ ವಸಂತನಗರದಲ್ಲಿರುವ 3 ನೇ ಆರೋಪಿಯಾದ ಶ್ರೀನಿವಾಸ್ ರವರ ಮನೆಯ ಬಳಿ ಕರೆದುಕೊಂಡು ಹೋಗಿದ್ದು ಅಲ್ಲಿ 1 ಮತ್ತು 2 ನೇ ಆರೋಪಿಗಳು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-16 ರಿಂದ ಚಾಸಾ-18 ರವರ ಸಮಕ್ಷಮ ಮಧ್ಯಾಹ್ನ 02.40-03.20 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ಮೇಲೆ ಹೇಳಿದಂತೆ 3 ನೇ ಆರೋಪಿಯ ಮನೆಯ ಮುಂದೆ ಜರುಗಿಸಿದ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-27** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-27(ಎ)** ಎಂದು ಗುರುತಿಸಲಾಯಿತು. ನಂತರ ದಿನಾಂಕಃ 08.10.2010 ರಂದು 1 ಮತ್ತು 2 ನೇ

ಆರೋಪಿಗಳನ್ನು ಪೋಲೀಸ್ ಅಭಿರಕ್ಷೆಯಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕಃ 19.10.2010 ರಂದು ನ್ಯಾಯಾಲಯದ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಕೆಎ04 ಎಂಬಿ 786 ನೋಂದಣಿ ಸಂಖ್ಯೆಯ ಕ್ವಾಲಿಸ್ ವಾಹನವನ್ನು ಅದರ ಮಾಲೀಕರಾದ ಚಾಸಾ-2 ರವರಿಗೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಗೆ 03 ಫೋಟೋಗಳನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಕ್ವಾಲಿಸ್ ವಾಹನವನ್ನು ಬಿಡುಗಡೆ ಮಾಡುವಾಗ ತೆಗೆದ ಫೋಟೋಗಳೆಂದು ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ 03 ಫೋಟೋಗಳನ್ನು ಕ್ರಮವಾಗಿ **ನಿ.ಪಿ.-28 ರಿಂದ ನಿ.ಪಿ.-30** ಎಂದು ಗುರುತಿಸಲಾಯಿತು. ದಿನಾಂಕಃ 10.11.2010 ರಂದು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಮೇಲೆ ಹೇಳದ ಕೆಎ04 ಎಂಬಿ 786 ನೋಂದಣಿ ಸಂಖ್ಯೆಯ ಕ್ವಾಲಿಸ್ ವಾಹನದ ಐ.ಎಂ.ವಿ. ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಕ್ವಾಲಿಸ್ ವಾಹನಕ್ಕೆ ಸಂಬಂಧಿಸಿದ ಐ.ಎಂ.ವಿ ವರದಿ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಐ.ಎಂ.ವಿ. ವರದಿಯನ್ನು **ನಿ.ಪಿ.-31** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-31(ಎ)** ಎಂದು ಗುರುತಿಸಲಾಯಿತು. ದಿನಾಂಕಃ 06.12.2010 ರಂದು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-1 ರವರಿಗೆ ಆದ ಗಾಯದ ಬಗ್ಗೆ ಚಾಸಾ-22 ರವರಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಚಾಸಾ-1 ರವರಿಗೆ ಆದ

ಗಾಯದ ಬಗ್ಗೆ ಚಾಸಾ-22 ರವರ ನೀಡಿದ ಗಾಯದ ಪ್ರಮಾಣ ಪತ್ರ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಗಾಯದ ಪ್ರಮಾಣ ಪತ್ರವನ್ನು **ನಿ.ಪಿ.-32** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-32(ಎ)** ಎಂದು ಗುರುತಿಸಲಾಯಿತು. ಈ ಮಧ್ಯೆ 3 ರಿಂದ 5 ನೇ ಆರೋಪಿಗಳ ಪತ್ತೆಯ ಬಗ್ಗೆ ಸಿಬ್ಬಂಧಿಗಳನ್ನು ನೇಮಿಸಿ ಪತ್ತೆ ಕಾರ್ಯ ನಡೆಸಿದ್ದು ಆದರೆ ಅವರುಗಳ ಬಗ್ಗೆ ಯಾವುದೇ ಸುಳಿವು ಸಿಕ್ಕಿರುವುದಿಲ್ಲ. ಈ ಬಗ್ಗೆ ಚಾಸಾ-35 ರವರಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಳಿಸಿ 3 ರಿಂದ 5 ನೇ ಆರೋಪಿಗಳು ತಲೆ ಮರೆಸಿಕೊಂಡ ಆರೋಪಿಗಳನ್ನಾಗಿ ತೋರಿಸಿ ದಿನಾಂಕಃ 15.12.2010 ರಂದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. 1 ಮತ್ತು 2 ನೇ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**